ಪ್ರಾರಂಭವಾಗಿದೆ. ವನ್ಯಪ್ರಾಣಿಗಳು ವಾಸ ಮಾಡುವಂತಹ ಸ್ಥಳವನ್ನು ನಾವು ಕಲುಷಿತಗೊಳಿಸುತ್ತಿದ್ದೇವೆ, ಆ ಕಾರಣದಿಂದ ಕಾಡಿನಿಂದ ಆನೆಗಳು ಹೊರಗಡೆ ಬರುತ್ತವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅರಣ್ಯವನ್ನು ಯಾರು ಕಲುಷಿತ ಮಾಡುತ್ತಿದ್ದಾರೆ ? ಯಾರು ಈ ಕೆಲಸವನ್ನು ಮಾಡುತ್ತಿದ್ದಾರೆ ? ಇದು ಮೂಲ ಕಾರಣ ನೈಸರ್ಗಿಕ ಅರಣ್ಯವನ್ನು ನಾಶಮಾಡಿ ಯೂಕಲಿಪ್ಟಸ್ ಮಾನೋಕಲ್ಚರ್ ಎಂದು ನಾವು ಏನು ಬೆಳೆಸುತ್ತಿದ್ದೇವೆ, ಆ ಕಾರಣದಿಂದ ತೀರ್ಥಹಳ್ಳಿಗೆ ಹುಲಿನೂ ಬರುತ್ತದೆ, ಹೆಗ್ಗಡದೇವನಕೋಟೆಗೆ ಗುಂಡ್ಲುಪೇಟೆಗೆ ಮತ್ತು ಬೆಂಗಳೂರಿಗೆ ಆನೆಗಳೂ ಬರುತ್ತವೆ. ಆದ್ದರಿಂದ ಸ್ವಲ್ಪ ಪ್ರಾಮಾಣಿಕವಾಗಿ ಆಲೋಚನೆ ಮಾಡೋಣ ಒತ್ತುವರಿ ಮಾಡಿರುವ ಸಣ್ಣ ರೈತರಿಂದ ಈ ಸಮಸ್ಯೆ ಉದ್ಭವವಾಗಿಲ್ಲ. ಈ ಸಮಸ್ಯೆ ಉದ್ಭವವಾಗಿರುವುದು ನಮ್ಮ ಸರ್ಕಾರಿ ನೀತಿಯಿಂದ ನಾವು ಅರಣ್ಯ ನೀತಿ, ಸಾಮಾಜಿಕ ಅರಣ್ಯೀಕರಣವನ್ನು ಏನು ಮಾಡಿದ್ದೇವೆ ಅದನ್ನು ಪುನರ್ವಿಮರ್ಶೆ ಮಾಡದೆ ಇದ್ದರೆ ಈ ವನ್ಯಪ್ರಾಣಿಗಳ ಕಾಟವನ್ನು ನಿಮ್ಮಿಂದ ಮಾತ್ರ ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಸಭಾಧ್ಯಕ್ಷರೆ, ಸಮಸ್ಯೆಯಿಂದ ದೂರ ಹೋಗಬೇಕು, ಅದಕ್ಕೆ ಬೇರೆ ತಿರುವು ಕೊಡಬೇಕೆನ್ನುವ ದೃಷ್ಟಿಯಿಂದ ನಾನು ಈ ಪ್ರಶ್ನೆಗೆ ಉತ್ತರಿಸುತ್ತಾ ಇಲ್ಲ, ಮಾನ್ಯ ಸದಸ್ಯರು ಹೇಳಿದಹಾಗೆ, ಈ ಪ್ರಶ್ನೆ ಮೂಲಭೂತವಾಗಿ ವಿಚಾರ ಪೂರಿತಕ್ಕ ಪ್ರಶ್ನೆ. ಮಾನ್ಯ ಕೆ. ಎಚ್. ಪಾಟೀಲ್‌ರವರು ಪ್ರಸ್ತಾಪ ಮಾಡುತ್ತಿದ್ದರು. ರಿಸರ್ವ್ ಫಾರೆಸ್ಟ್ ಏನಿದೆ ಅಲ್ಲಿ ಒತ್ತುವರಿ ಯಾರು ಮಾಡಿರುತ್ತಾರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವೇ ಇಲ್ಲ, ಅದನ್ನು ಸರ್ಕಾರ ಮಾಡುವುದೇ ಇಲ್ಲ. ನಾವು ಸಿ ಅಂಡ್ ಡಿ ಲ್ಯಾಂಡ್ ಎಂದು ಏನು ಹೇಳಿದ್ದೇವೆ ಅದರಲ್ಲೂ ಹಳೆಯ ಮೈಸೂರು ಭಾಗದಲ್ಲಿ ರಿಸರ್ವ್ ಫಾರೆಸ್ಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಎಂದು ಇತ್ತು. ಹಾಗಾಗಿ ಮನೆಯಿಂದ ಆಚೆ ಹೋದರೂ ಕೂಡ ಅದನ್ನು ಫಾರೆಸ್ಟ್ ಎಂದು ಕರೆಯುತ್ತಿದ್ದರು. ಇಂತಹ ಕೆಲವು ಭಾಗಗಳನ್ನು ಕೆಲವರು ಸಣ್ಣಪುಟ್ಟ ರೈತರು ಒತ್ತುವರಿ ಮಾಡಿದ್ದಾರೆ, ಅದನ್ನು ನಾವು ಖಾಯಂ ಮಾಡಿ ಕೊಡಲೇಬೇಕಾಗುತ್ತದೆ. ಇದನ್ನೆ ನೆಪ ಮಾಡಿಕೊಂಡು ರಿಸರ್ವ್ ಫಾರೆಸ್ಟನ್ನು ಕೆಲವರು ದೊಡ್ಡವರು ಒತ್ತುವರಿ ಮಾಡಿದ್ದಾರೆ. ಕೆಲವರು ಗ್ರ್ಯಾಂಟನ್ನು ಸಹ ಮಾಡಿಸಿಕೊಂಡಿದ್ದಾರೆ. ಈ ರೀತಿ ಕೆಲವರು ಗ್ರ್ಯಾಂಟ್ ಮಾಡಿಸಿಕೊಂಡಿರುವುದನ್ನು ಪುನರ್ಪರಿಶೀಲನೆ ಮಾಡಿ ಇವತ್ತಿನದಿವಸ ಅದನ್ನು ಮಜಾ ಮಾಡಬೇಕಾಗುತ್ತದೆ ಏತಕ್ಕೆ ಅಂದರೆ ಎಲ್ಲಿ ಹೆಚ್ಚು ಬೆಲೆ ಬಾಳತಕ್ಕ ಮರಗಳಿವೆ ಅಲ್ಲಿ ಫಾರೆಸ್ಟ್ ಲ್ಯಾಂಡನ್ನು ಸ್ಕ್ರಾಂಕ್ಷನ್ ಮಾಡಿಸಿಕೊಂಡಿರತಕ್ಕದ್ದು ಉಂಟು. ಅದನ್ನು ಪುನರ್ ಪರಿಶೀಲನೆ ಮಾಡುವ ಅವಶ್ಯಕತೆ ಇದೆ. ಇನ್ನೊಂದು ವಿಚಾರ ಹೇಳಿದ್ದೇನೆ, ಹಾರಂಗಿ ಡ್ಯಾಮ್ ಕಟ್ಟಿದ್ದೇವೆ, ಕಂಬ್ರದಕ ಡ್ಯಾಮ್ ಕಟ್ಟಿದ್ದೇವೆ. ಹೇಮಾವತಿ ಕಟ್ಟಿದ್ದೇವೆ. ಈ ನದಿಗಳಂ ಹರಿಯುತ್ತಾ ಇದ್ದದ್ದೇ ಆನೆಗಳಿದ್ದಂಥ ಒಂದು ಪ್ರದೇಶದಲ್ಲಿ. ಅಲ್ಲೆಲ್ಲಾ ಇದು ಬಂದಿದ್ದರಿಂದ ಇವತ್ತು ಅವಕ್ಕೆ ಇರುವುದಕ್ಕೆ ಜಾಗವಿಲ್ಲದ ಪರಿಸ್ಥಿತಿ ಒಂದು ಅವು ಬೆಂಗಳೂರಿಗೂ ಬರತಕ್ಕಂಥ ಪರಿಸ್ಥಿತಿಯಾಗಿದೆ. ಮತ್ತೆ ತೀರ್ಥಹಳ್ಳಿಯನ್ನೂ ಬಿಟ್ಟು ಬರತಕ್ಕಂಥ ಪರಿಸ್ಥಿತಿಯಾಗಿ ಇವತ್ತು ಈ ತೊಂದರೆಗೆ ಒಳಗಾಗಿದ್ದೇವೆ. ನಾವು ಇದರಿಂದ ದೂರಹೋಗಬೇಕೆಂದು ವಿಚಾರ ಮಾಡುತ್ತಿಲ್ಲ ಮಾನ್ಯ ಸದಸ್ಯರು ಯೂಕಲಿಪ್ಟಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಫಾರೆಸ್ಟ್ ಇಲಾಖೆಯ ಮೇಲೆ ಚರ್ಚೆ ಮಾಡುವಾಗ ಆ ಸಮಯದಲ್ಲಿ ಪ್ರಸ್ತಾಪ ಮಾಡುವುದಂ ಅವಶ್ಯಕತೆಯಿದೆ. ಉತ್ತಮವಾಗಿರತಕ್ಕ ಸಲಹೆಗಳನ್ನು ಹೇಳಬಹುದು. ಆ ಸಮಯದಲ್ಲಿ ಅದಕ್ಕೆ ಉತ್ತರ ಕೊಡಲಿಕ್ಕೆ ಇಷ್ಟಪಡುತ್ತೇನೆ.

Strength of the daily wages workers in Forest Department, Bidar.

451 Sri Narayana Rao Manahalli (Bidar).—Will the Minister for Forests be pleased to state.—

a) the number of daily wages workers are working in the Forest Deptt. in Bidar District since 5 to 10 years.

b) whether it has come to the notice of the Government that these workers are not getting minimum wages as per the orders of Supreme Court ?

c) if so, the steps taken by the Government to pay them minimum wages ?

Sri K. H. Ranganath (Minister for Forests).—

) 192 workers.

b) All the daily wage workers working from the date prior to 1-11-1984 and who continue to be working are paid wages as per Supreme Court orders reiterated in G. O. No. DPAR 10 SLC 89 dated 29-4-1989.

c) As in (b)

ಶ್ರೀ ನಾರಾಯಣರಾವ್ ಮನಹಳ್ಳಿ.—ಸನ್ಮಾನ್ಯ ಅಧ್ಯಕ್ಷರೆ. ಬೀದರ್ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರಿಗೆ ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಪಗಾರ ಕೊಡುತ್ತಿದ್ದೇವೆಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇಡೀ ಕರ್ನಾಟಕದಲ್ಲಿ ದಿನಗೂಲಿ ನೌಕರರು ಇದ್ದಾರೆ. ಬೀದರ್‌ನಲ್ಲಿ ಬಹುಶಃ ೫-೧೦ ವರ್ಷಗಳಿಂದ ಸಂಬಂಧಪಟ್ಟ ಇಲಾಖೆಯಲ್ಲಿ ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪಗಾರ ಅಂತೂ ಕೊಡುತ್ತಾರೆ. ಆದರೆ ದಿನಂಪ್ರತಿ ೧೨ ರೂಪಾಯಿ ಪ್ರಕಾರ ಪಗಾರ ಕೊಡುತ್ತಿದ್ದಾರೆ. ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ ಮಿನಿಮಂ ವೇಜಸ್ ಏನು ಸಿಗಬೇಕು ಆ ಪ್ರಕಾರ ಸಿಗುತ್ತಿಲ್ಲ. ಅದರ ಸಲುವಾಗಿ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.— ಮಾನ್ಯ ಅಧ್ಯಕ್ಷರೆ, ಈಗ ದಿನಗೂಲಿ ನೌಕರರಿಗೆ ಕೊಡತಕ್ಕ ಕೂಲಿ ಏನಿದೆ ಅದು ಮಿನಿಮಮ್ ವೇಜಸ್‌ನಷ್ಟೇ ಇದೆ, ಅದಕ್ಕಿಂತ ಕಡಿಮೆ ಏನೂ ಇಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ.—ಬರೀ ೧೨ ರೂಪಾಯಿ ಪ್ರಕಾರ ಕೊಡುತ್ತಿದ್ದಾರೆ. ಮಿನಿಮಮ್ ವೇಜಸ್ ಪ್ರಕಾರ ಕನಿಷ್ಟ ತಿಂಗಳಿಗೆ ೫೦೦ ರೂಪಾಯಿ ಕೊಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಸ್ವಲ್ಪ ಹೆಚ್ಚು ಕಡಿಮೆ ಆಲ್ಲಿಗೆ ಬರುತ್ತದೆ. ೧೨ × ೩೦—೪೦೦ ಆಗುತ್ತದೆ. ಐದು ನೂರು ರೂಪಾಯಿಗಳಿಗೆ ಬರುತ್ತದೆ. ಇನ್ನೊಂದು ೨೦ ರೂಪಾಯಿ ಮಾತ್ರ ಕಡಿಮೆಯಾಗುತ್ತದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—೧೨ × ೩೦—೩೬೦ ಆಯಿತು, ೪೦೦ ಅಷ್ಟೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಮಗ್ಗಿ ತಪ್ಪು ಹೇಳಿದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಆದರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಈ ತರಹ ಕೊಡುತ್ತಿಲ್ಲ. ಬೀದರ್‌ನಲ್ಲಿ ದಿನಗೂಲಿ ನೌಕರರು ಸ್ಟೈಕ್ ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಅದಕ್ಕೆ ನಾನು ಮಧ್ಯಸ್ಥಿಕೆ ವಹಿಸಿ, ಸರ್ಕಾರವನ್ನು ಕೇಳಿ ಬೇರೆ ವಿಚಾರ ಮಾಡಿರಿ ಎಂದು ಹೇಳಿದಾಗ ಅವರು ಸುಮ್ಮನೆ ಇದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಇದು ವ್ಯಾಪಕವಾಗಿರತಕ್ಕಂಥ ಪ್ರಶ್ನೆ. ತಾವು ಮೊನ್ನೆ ಪತ್ರಿಕೆಯಲ್ಲಿ ಓದಿರಬಹುದು. ಸುಪ್ರೀಂ ಕೋರ್ಟ್‌ನವರು ಮೊನ್ನೆ ತಾನೆ ೧೮ ಸಾವಿರ ಜನರಿಗೆ ದುಡ್ಡು ಕೊಟ್ಟು ಬಿಡಿ ಎಂದು ಹೇಳಿದ್ದಾರೆ. ಹೀಗಾಗಿ ಸಮಸ್ಯೆ ದೊಡ್ಡದಾಗಿದೆ, ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಆವರ ಮೆನಸ್ಸಿನಲ್ಲಿರುವ ಆತಂಕವನ್ನು ನನ್ನ ಜೊತೆಗೆ ಪ್ರಸ್ತಾಪ ಮಾಡಲಿ, ಆಲ್ಲಿರತಕ್ಕಂಥ ನೌಕರರಿಗೆ ಅನುಕೂಲವಾಗುವ ರೀತಿಯಲ್ಲಿ ವಿಚಾರ ಮಾಡುತ್ತೇನೆ.

(ಪ್ರಶ್ನೆ ೧೭೪ (೪೫೩) ಮಾನ್ಯ ಸದಸ್ಯರಾದ ಶ್ರೀ ಕೆ. ಸೋಮಪ್ಪ ಸುವರ್ಣ ಆವರು ಗೈರು ಹಾಜರಿದ್ದರು)

ಬೆಳಗಾವಿಯಲ್ಲಿ ಶಿಕ್ಷಕರುಗಳ ಕೊರತೆ

೪೫೫ ಶ್ರೀ ಶಿವಾನಂದ ಎಚ್ ಕೌಜಲಗಿ (ಬೈಲಹೊಂಗಲ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)